ಜ಼ೀ ಕನ್ನಡ ಕಳೆದ ಹತ್ತು ವರ್ಷಗಳಿಂದ ಅತ್ಯುತ್ತಮ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿದ್ದು ಗುಣಮಟ್ಟದ ಮನರಂಜನೆಗೆ ಮನೆಮಾತಾಗಿದೆ. ನಾಗಿಣಿ, ಬ್ರಹ್ಮಗಂಟು, ಮಹಾದೇವಿ, ಗಂಗಾದಂತಹ ವಿಭಿನ್ನ ಕಥಾಹಂದರವುಳ್ಳ ಧಾರಾವಾಹಿಗಳು, ಡ್ರಾಮಾ ಜೂನಿಯರ್ಸ್, ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್‌ನಂತಹ ಜನಮೆಚ್ಚಿದ ರಿಯಾಲಿಟಿ ಶೋಗಳ ಯಶಸ್ಸಿನ ನಂತರ 'ಯಾರೆ ನೀ ಮೋಹಿನಿ' ಎಂಬ ಕೌಟುಂಬಿಕ ಹಿನ್ನೆಲೆಯ ಹಾರರ್ ಧಾರಾವಾಹಿಯನ್ನು ಕನ್ನಡಿಗರ ಮನೆಮನಗಳಿಗೆ ತಲುಪಿಸುವುದಕ್ಕೆ ಸಿದ್ಧವಾಗಿದೆ ಜ಼ೀ ಕನ್ನಡ.

ಕಥಾನಾಯಕ ಮುತ್ತುರಾಜ ಶ್ರೀಮಂತ ಮನೆತನದವನು. ರೈಸ್ ಮಿಲ್ ಒಂದನ್ನ ಯಶಸ್ವಿಯಾಗಿ ನಡೆಸುತ್ತಿದ್ದು, ಊರಿಗೆ ಮಾದರಿಯಾದ ಉದ್ಯಮಿ. ಚಿತ್ರಾಳನ್ನು ಮದುವೆಯಾದ ಕೆಲವೇ ವರ್ಷಗಳಲ್ಲಿ ಅವಳನ್ನು ಕಳೆದುಕೊಂಡು, ಆ ನೋವಿನಿಂದ ಸದಾ ಬಳಲುತ್ತಿದ್ದಾನೆ. ಮಲತಾಯಿ ನೀಲಾಂಬರಿ ಎಂದರೆ ಮುತ್ತುವಿಗೆ ಸರ್ವಸ್ವ. ಮೇಲ್ನೋಟಕ್ಕೆ ಮುತ್ತುವಿಗೆ ಕಾಳಜಿ ತೋರಿಸುವ ನೀಲಾಂಬರಿಗೆ ಅವನನ್ನು ಕೊಂದು ಆಸ್ತಿಯನ್ನು ಪಡೆಯಬೇಕೆಂಬ ದುರಾಸೆ. ಕಥೆಯ ನಾಯಕಿ ಬೆಳ್ಳಿ, ಚಿಕ್ಕಂದಿನಿಂದ ತನ್ನ ಮಾವ ಮುತ್ತು ಮೇಲೆ ಜೀವವನ್ನೇ ಇಟ್ಟುಕೊಂಡಿದ್ದಾಳೆ. ಪ್ರತೀ ಕ್ಷಣ, ಪ್ರತೀ ನಿಮಿಷ ಮುತ್ತುವನ್ನು ಮದುವೆಯಾಗುವ ಕನಸು ಈಕೆಯದ್ದು.

ಕನ್ನಡ

VICCO turmeric

# ಯಾರೆ ನೀ ಮೋಹಿನಿ

SPECIAL PARTNER

Sparsh

## ಇದ್ದೂ ಇಲ್ಲದಂಥವಳು...

## ಸೋಮ-ಶುಕ್ರ ರಾತ್ರಿ 7.30ಕ್ಕೆ

ಪ್ರೀತಿ ಚಿರಾಯು ಎನ್ನುವುದಕ್ಕೆ ಸಾಕ್ಷಿಯಾಗಿ ಮುತ್ತುವಿನ ಮೊದಲ ಹೆಂಡತಿ ಚಿತ್ರಾಳ ಆತ್ಮ ಮೋಹಿನಿ ರೂಪದಲ್ಲಿ ಬಂದು ನೀಲಾಂಬರಿ ಎಂಬ ಹೆಮ್ಮಾರಿಯಿಂದ ಕಾಪಾಡುತ್ತಾಳೆ. ಅದರ ಜೊತೆಗೆ ತನ್ನ ಗಂಡ ಮುತ್ತುವಿಗೆ ಬೆಳ್ಳಿಯೇ ಸರಿಯಾದ ಹೆಂಡತಿ ಎಂದು ತಿಳಿದು, ಅವರ ಜೋಡಿಗೆ ರಕ್ಷಾ ಕವಚವಾಗಿ ನಿಲ್ಲುತ್ತಾಳೆ. ನೀಲಾಂಬರಿ ಒಡ್ಡೋ ಸವಾಲುಗಳಿಂದ ಹೆಜ್ಜೆ ಹೆಜ್ಜೆಗೂ ಇವರಿಬ್ಬರನ್ನ ಪಾರು ಮಾಡಿ ಹೇಗೆ ಒಂದು ಮಾಡುತ್ತಾಳೆ ಎನ್ನುವುದೇ ಯಾರೆ ನೀ ಮೋಹಿನಿಯ ಕಥೆ.

ಈಗಾಗಲೇ ಚಿ.ಸೌ.ಸಾವಿತ್ರಿ, ದೇವಿ, ಶ್ರೀರಸ್ತು ಶುಭಮಸ್ತು, ಪುನರ್ ವಿವಾಹ, ಮಹಾದೇವಿ, ಬ್ರಹ್ಮಗಂಟುವಿನಂತಹ ಯಶಸ್ವಿ ಧಾರಾವಾಹಿಗಳನ್ನ ನಿರ್ಮಿಸಿ, ನಿರ್ದೇಶಿಸಿರುವ ಶೃತಿ ನಾಯ್ಡುರವರು ಯಾರೆ ನೀ ಮೋಹಿನಿಯ ನಿರ್ಮಾಣ ಮತ್ತು ನಿರ್ದೇಶನದ ಹೊಣೆ ಹೊತ್ತಿದ್ದಾರೆ. ಇದರ ಜೊತೆ ಹಲವು ಪ್ರಸಿದ್ಧ ನಟ ನಟಿಯರು, ನುರಿತ ತಂತ್ರಜ್ಞರ ದೊಡ್ಡ ತಂಡವೇ ಈ ಧಾರಾವಾಹಿಗೆ ಕೆಲಸ ಮಾಡುತ್ತಿದೆ. ಗ್ರಾಫಿಕ್ಸ್ ಸ್ಪರ್ಶದೊಂದಿಗೆ ಈ ಧಾರಾವಾಹಿ ನೋಡಲು ಇನ್ನಷ್ಟು ಕುತೂಹಲಕಾರಿಯಾಗಿರುತ್ತದೆ ಅನ್ನೋದು ತಂಡದ ಅಭಿಪ್ರಾಯ.

ಯಾರೆ ನೀ ಮೋಹಿನಿ ಧಾರಾವಾಹಿ, ಸೋಮವಾರದಿಂದ – ಶುಕ್ರವಾರದವರೆಗೆ ರಾತ್ರಿ 7.30 ಕ್ಕೆ ಜ಼ೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗಲಿದೆ.

